**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನವೀನ್ ಕೆ.ಎಸ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ವಿದ್ಯುತ್ ಇಲಾಖೆಯಲ್ಲಿನ ಆಸ್ತಿಗಳನ್ನು ಅಡಮಾನವಿಟ್ಟಿರುವ ಬಗ್ಗೆ.

* * * * *

**ಉತ್ತರ**:ಕರ್ನಾಟಕ ವಿದ್ಯುತ್ ನಿಗಮವು (ಕ.ವಿ.ನಿ.ನಿ) ಬಂಡವಾಳ ವೆಚ್ಚಕ್ಕಾಗಿ (Capital Expenditure)) ಮತ್ತು ಕಾರ್ಯಾಚರಣೆ ವೆಚ್ಚಕ್ಕಾಗಿ (Operational Expenditure) PFC, REC ಮತ್ತು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕ್‌ಗಳಿಂದ ಕಳೆದ 5 ದಶಕಗಳಿಂದ ನಿಯಮಿತವಾಗಿ ಸಾಲ ಪಡೆಯುತ್ತಿದ್ದು, ಬಂಡವಾಳ ವೆಚ್ಚಕ್ಕಾಗಿ ಸಾಲಗಳನ್ನು ಆಯಾ ಯೋಜನಾ ಆಸ್ತಿಗಳ ಭದ್ರತೆಯ (Hypothecation) ಮೇರೆಗೆ ಪಡೆಯುತ್ತಿದೆ. ಕಾರ್ಯಾಚರಣೆ ವೆಚ್ಚಕ್ಕಾಗಿ (Operational Expenditure) ಸಾಲಗಳನ್ನು ವ್ಯಾಪಾರ ಸಂಬಂಧ ಬರತಕ್ಕ ಬಾಕಿ, ಸರಕು ದಾಸ್ತಾನು ಹಾಗೂ ಯಂತ್ರೋಪಕರಣಗಳ (Receivables, Inventory and Plant & Machinery)) ಭದ್ರತೆಯ ಮೇರೆಗೆ ಪಡೆಯುತ್ತಿದೆ. ನಿಗಮವು ಜಲವಿದ್ಯುತ್ ಘಟಕಗಳ ಅಣೆಕಟ್ಟು (Dams)ಗಳನ್ನು ಯಾವುದೇ ಸಾಲಗಳಿಗೆ ಭದ್ರತೆಯಾಗಿ ನೀಡಿರುವುದಿಲ್ಲ.

PFC, REC ಮತ್ತು ವಾಣಿಜ್ಯ ಬ್ಯಾಂಕ್‌ಗಳಿಗೆ ಭದ್ರತೆ ನೀಡಲಾದ ಒಟ್ಟು ಆಸ್ತಿಗಳ ವಿವರ:

ರೂ.ಕೋಟಿಗಳಲ್ಲಿ

| ಆರ್ಥಿಕ ವರ್ಷದವರೆಗೆ | ಭದ್ರತೆ ನೀಡಲಾದ ಆಸ್ತಿಗಳ ಒಟ್ಟು ಮೊತ್ತ |
|---|---|
| 2018-19 | 21821 |
| 2019-20 | 26461 |
| 2020-21 | 28097 |
| 2021-22 | 29433 |
| 2022-23 | 31258 |

ಕರ್ನಾಟಕ ವಿದ್ಯುತ್ ನಿಗಮ ಮತ್ತು ರಾಯಚೂರ್ ಪವರ್ ಕಾರ್ಪೋರೇಷನ್ (RPCL) ಗಳಿಗೆ ದಿನಾಂಕ :10.12.2023 ರಂದು ವಿದ್ಯುತ್ ಸರಬರಾಜು ಕಂಪನಿಗಳಿಂದ ಬಾಕಿಯಿರುವ ಮೊತ್ತ ಕೆಳಕಂಡಂತಿದೆ .

(ರೂ.ಕೋಟಿಗಳಲ್ಲಿ)

| ವಿದ್ಯುತ್ ಸರಬರಾಜು ಕಂಪನಿ | ಕವಿನಿನಿ | ಆರ್.ಪಿ.ಸಿ.ಎಲ್ | ಒಟ್ಟು |
|---|---|---|---|
| ಬೆಸ್ಕಾಂ | 10104 | 2364 | 12468 |
| ಮೆಸ್ಕಾಂ | 1761 | 14 | 1775 |
| ಸೆಸ್ಕಾಂ | 1740 | 345 | 2085 |
| ಹೆಸ್ಕಾಂ | 1906 | 377 | 2283 |
| ಜೆಸ್ಕಾಂ | 1188 | 548 | 1736 |
| ಒಟ್ಟು | **16699** | **3648** | **20347** |

ಪ್ರಸ್ತುತ 2023-24ನೇ ವಿತ್ತೀಯ ವರ್ಷದಲ್ಲಿ ದಿನಾಂಕ:10.12.2023 ರವರೆಗೂ ವಿದ್ಯುತ್ ಮಾರಾಟ ಬೇಡಿಕೆ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಂದ (ವಿಸಕಂ) ಪಾವತಿಸಿದ ವಿವರಗಳು ಕೆಳಕಂಡಂತಿದೆ :

(ರೂ.ಕೋಟಿಗಳಲ್ಲಿ)

| ವಿದ್ಯುತ್ ಸರಬರಾಜು ಕಂಪನಿ | ಕವಿನಿನಿ | | ಆರ್.ಪಿ.ಸಿ.ಎಲ್ | | ಒಟ್ಟು | | |
|---|---|---|---|---|---|---|---|
| | ಕವಿನಿನಿಯ ಬೇಡಿಕೆ | ವಿಸಕಂಗಳು ಪಾವತಿಸಿದ ಮೊತ್ತ | ಆರ್.ಪಿ.ಸಿ.ಎಲ್ ಬೇಡಿಕೆ | ವಿಸಕಂಗಳು ಪಾವತಿಸಿದ ಮೊತ್ತ | ಒಟ್ಟು ಬೇಡಿಕೆ | ಒಟ್ಟು ಪಾವತಿ | ಒಟ್ಟು ಪಾವತಿ (ಶೇ) |
| ಬೆಸ್ಕಾಂ | 4035 | 3520 | 1776 | 1285 | 5811 | 4805 | 83 |
| ಮೆಸ್ಕಾಂ | 582 | 489 | 236 | 266 | 818 | 755 | 92 |
| ಸೆಸ್ಕಾಂ | 463 | 441 | 138 | 139 | 601 | 580 | 97 |
| ಹೆಸ್ಕಾಂ | 718 | 702 | 165 | 238 | 883 | 940 | 106 |
| ಜೆಸ್ಕಾಂ | 974 | 761 | 441 | 206 | 1415 | 967 | 68 |
| ಒಟ್ಟು | **6772** | **5913** | **2756** | **2134** | **9528** | **8047** | **84** |

ಸಂಖ್ಯೆ: ಎನರ್ಜಿ 319 ಇಬಿಎಸ್ 2023

(ಕೆ.ಜೆ.ಜಾರ್ಜ್) 13/12/23
ಇಂಧನ ಸಚಿವರು